

# ನಿರ್ಜಲನೇಮ

## ಆಸ್ಪತ್ರೆ ವಾಸ, ಸರ್ಜರಿ ಅನುಭವ ಕಥನ

ಮೆದುಳಿನ ಶಸ್ತ್ರಚಿಕಿತ್ಸೆಗೆ ಒಳಗಾಗಿ ಆಸ್ಪತ್ರೆಯಲ್ಲಿ ಅನುಭವಿಸಿದ ನೋವು ಯಾತನೆ ಕಷ್ಟ ಸಂಕಷ್ಟಗಳ ಕುರಿತ ಈ ಅನುಭವ ಕಥನ, ಶಸ್ತ್ರಚಿಕಿತ್ಸೆ ಎಂದರೆ ಆಸ್ಪತ್ರೆಯಲ್ಲಿ ಏನೆಲ್ಲ ಮಾಡುತ್ತಾರೆ? ಯಾವೆಲ್ಲ ಪರೀಕ್ಷೆಗಳನ್ನು ಹೇಗೆ ಎದುರಿಸುವುದು ಎಂಬ ಬಗ್ಗೆ ಪ್ರತ್ಯಕ್ಷ ಮಾಹಿತಿಯನ್ನು ನೀಡುತ್ತದೆ. ಯಶಸ್ವಿ ಶಸ್ತ್ರಚಿಕಿತ್ಸೆ ಅನುಭವಿಸುವ ಪರಿ ಎಂಥದ್ದು ಎಂಬುದನ್ನು ಲೇಖನ ರೋಚಕವಾಗಿ ಕಟ್ಟಿಕೊಟ್ಟಿದೆ.

■ ಸುಮಾವೀಣಾ

'ನಿರ್ಜಲ ಏಕಾದಶಿ' ಎಲ್ಲರಿಗೂ ಗೊತ್ತು ಆದರೆ ಈ 'ನಿರ್ಜಲನೇಮ'ದ ಬಗ್ಗೆ ಯಾರಿಗೂ ತಿಳಿದಿರಲಿಕ್ಕಿಲ್ಲ. ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಯಲ್ಲಿ ನಾನೇ ಆಚರಿಸಿದ ವೈದ್ಯಕೀಯ ನೇಮವಷ್ಟೇ ಇದು. ಪೂರ್ವ ನಿಗದಿಯಂತೆ ಅಕ್ಟೋಬರ್ 8ರ ಬೆಳ್ಳಂಬೆಳಗ್ಗೆ ಆಸ್ಪತ್ರೆ ತಲುಪಿ ಕುಳಿತರೂ ಬೆಡ್ ಸಿಗಲು 12.30 ಆಯಿತು. ಅತೀ ತಲೆನೋವು, ತಲೆಸುತ್ತಿನಿಂದ ಬಳಲುತ್ತಿದ್ದ, ನೇರವಾಗಿ ನಡೆಯಲಾಗದೆ ಸಪೋರ್ಟ್ ತೆಗೆದುಕೊಂಡು ನಡೆಯುತ್ತಿದ್ದ ನನಗೆ ವೀಲ್ ಚೇರ್ ಸಿಕ್ಕೊಡನೆ ಬೀಳುವ ಭಯದಿಂದ ಮುಕ್ತವಾಗಿ 'ಬದುಕಿತು ಬಡಜೀವ' ಎನ್ನಿಸಿತು.

ವೀಲ್ ಚೇರ್‌ನಲ್ಲಿ ಸಾಗುತ್ತಿದ್ದಂತೆ 'ಎಂಥಾ ರಾಜಯೋಗವಿದು, ಎಂಥಾ ಸುಯೋಗವಿದು' ಎಂದುಕೊಂಡೆ. ಡಾಕ್ಟರ್ ತೌಫಿಕ್ ಅಹ್ಮದ್ ಬಂದು 'ನಿಮಗೆ ಕೆಲವು ಪರೀಕ್ಷೆಗಳನ್ನು ಮಾಡುತ್ತೇನೆ' ಎಂದು ಹಲವು ರೀತಿಯ ಪರೀಕ್ಷೆಗಳನ್ನು ಮಾಡಿದರು. ಅವರು 'ಥೈರಾಯಿಡ್ ಯಾವಾಗದಿಂದ?' ಎಂದದ್ದಕ್ಕೆ 'ಬಿಫೋರ್ ಕೊರೊನಾ' ಎಂದೆ. 'ಡಯಾಬಿಟಿಸ್ ಯಾವಾಗಿನಿಂದ?' ಎಂದರು. 'ಆಫ್ಟರ್ ಕೊರೊನಾ' ಎಂದೆ. ಅದಕ್ಕವರು ನಗುತ್ತ 'ಹಾಗಲ್ಲ ಸರಿಯಾಗಿ ಯಾವಾಗಿನಿಂದ ಹೇಳಬಹುದಾ?' ಎನ್ನುತ್ತಿದ್ದಂತೆ ನೆನಪಿಸಿಕೊಂಡು ಹೇಳಿದೆ.

ಇಸಿಜಿಯವರು, ಕರ್ತವ್ಯ ವೈದ್ಯರು... ಹೀಗೆ ಒಬ್ಬೊಬ್ಬರು ಬರುತ್ತಿದ್ದಂತೆ ನನ್ನಲ್ಲಿ ಅವ್ಯಕ್ತ ಭಯ ಹೆಚ್ಚಾಗುತ್ತಿತ್ತು. ಅಲ್ಟ್ರಾಸೌಂಡ್ ಸ್ಕ್ಯಾನಿಂಗ್, ಎಕ್ಸರೇಗಳಿಗೆ ವೀಲ್ ಚೇರ್‌ನಲ್ಲಿ ಹೋಗುವಾಗ ಭಯದ ಜೊತೆಗೆ ಗೆಲ್ಲುವ ವಿಶ್ವಾಸವಿರುತ್ತಿತ್ತು. ಎಂಆರ್‌ಐ ಸ್ಕ್ಯಾನ್‌ಗೆ ಹೋದಾಗ ಅಲ್ಲಿ ನೈಜೀರಿಯಾದವರು ತಮ್ಮದೇ ಭಾಷೆಯಲ್ಲಿ, ಯಾರನ್ನು ಯಾವುದನ್ನು ಗೊತ್ತಿಲ್ಲ ಎಂದು ಅಣಕಿಸುತ್ತಿರುವುದಂತೂ ತಿಳಿಯಿತು. ಆ ಸೂಕ್ಷ್ಮವನ್ನು ಅರಿಯುವ ಮೊದಲೇ ಟೆಕ್ನೀಶಿಯನ್ ಬಂದು 'ಮೇಡಂ 45 ನಿಮಿಷ ಆಗುತ್ತೆ, ನಿಮಗೆ ವಾಶ್ ರೂಮಿಗೆ ಹೋಗುವುದಿದ್ದರೆ ಹೋಗಿ ರಿಲ್ಯಾಕ್ಸ್ ಆಗಿ' ಎಂದರು. 'ಇಲ್ಲ ನಾನು ಆರಾಮಾಗಿದ್ದೇನೆ' ಎನ್ನುತ್ತಾ ಒಳ ಹೋದೆ. ಅಲ್ಲಿಯ ಸಿಬ್ಬಂದಿಯ ಮುಖಭಾವದಲ್ಲಿ ಅನುಕಂಪದ ರೇಖೆ ಮೂಡಿ ಮರೆಯಾಗುತ್ತಿತ್ತು.